ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಜಿ. ವೆಂಕಟೇಶ, ಅಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಮುಧೋಳ, ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಲೋಕಾಯುಕ್ತರವರಿಗೆ ವಹಿಸುವ ಕುರಿತು.

**ಓದಲಾಗಿದೆ:** ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಎ.ಆರ್.ಎಲ್.ಓ-2, ಇವರ ಅ.ಸ. ಪತ್ರ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಮ್-136/2010/ ಎ.ಆರ್.ಎಲ್.ಓ-2, ದಿನಾಂಕ: 22.07.2016

****

**ಪ್ರಸ್ತಾವನೆ:**

ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಎ.ಆರ್.ಎಲ್.ಓ-2 ಇವರು ಮೇಲೆ ಓದಲಾದ(1)ರ ಪತ್ರದಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರಡಿ ಮಾನ್ಯ ಉಪಲೋಕಾಯುಕ್ತರು-1 ಇವರು ನೀಡಿರುವ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಇತರ ದಾಖಲಾತಿಗಳನ್ನು ಸರ್ಕಾರವು ಪರಿಶೀಲಿಸಿದೆ. ಮುಧೋಳ ತಾಲ್ಲೂಕಿನ ಆಲಗುಂಡಿ ಬಿ.ಕೆ.ಗ್ರಾಮದ ಸರ್ಕಾರಿ ಗಾಯರಾಣ ಜಮೀನು ಸಂ. ನಂ. 29ರ ಕ್ಷೇತ್ರ 7 ಎಕರೆ 3 ಗುಂಟೆ ಜಮೀನನ್ನು 67 ಜನರಿಗೆ ಹಂಚಿಕೆ ಮಾಡಿರುವುದಾಗಿ ಹಾಗೂ ಸ.ನಂ. 253ರ ಕ್ಷೇತ್ರ 4 ಎಕರೆ 12 ಗುಂಟೆ ಹಾಗೂ ಸ.ನಂ. 260ರ ಕ್ಷೇತ್ರ 27 ಗುಂಟೆ ಜಮೀನನ್ನು, ಈ ಹಿಂದೆ ಮಾಚಕನೂರು ಗ್ರಾಮ ಪಂಚಾಯತಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ, ಶ್ರೀ ಗುರುಬಸವಯ್ಯ ಎಂ.ಹಿರೇಮಠ(1ನೇ ಎದುರುದಾರರು) ಹಲವಾರು ಜನರಿಗೆ ಮಾರಾಟ ಮಾಡಿರುತ್ತಾರೆಂದು ಆರೋಪಿಸಿ ಇವರ ವಿರುದ್ಧ ಹಾಗೂ ಮುಧೋಳ ತಾಲ್ಲೂಕು ಪಂಚಾಯತ್‌ನಲ್ಲಿ ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಜಿ.ವೆಂಕಟೇಶ್, (2ನೇ ಎದುರುದಾರರು) ಇವರ ವಿರುದ್ಧ ಆಲಗುಂಡಿ ಬಿ.ಕೆ ಗ್ರಾಮದ ನಿವಾಸಿಯಾದ ಶ್ರೀ ಸಿದ್ದಪ್ಪ ಗುರುಪಾದಪ್ಪ ತೆಗ್ಗಿ, ಇವರು ನೀಡಿದ್ದ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಪಡೆದು, ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಪಡೆದು, ದೂರುದಾರರ ದೂರು ಮತ್ತು ಎದುರುದಾರರ ಆಕ್ಷೇಪಣೆಗಳು ಹಾಗೂ ದೂರುದಾರರ ಪ್ರತ್ಯುತ್ತರದ ಮೇಲೆ ತಹಶೀಲ್ದಾರ್ ಮುಧೋಳ್, ಇವರಿಂದ ದಿನಾಂಕ: 20.05.2013 ರಂದು ಪಡೆಯಲಾಗಿದ್ದ ವರದಿಯಲ್ಲಿ, ಸ.ನಂ 253 ಹಾಗೂ 260 ರಲ್ಲಿ ಯಾವುದೇ ಅತಿಕ್ರಮಣ ವಾಗಿರುವುದಿಲ್ಲವೆಂದು ಹಾಗೂ ಉಳಿದ ಸ.ನಂ. 29ರ 8 ಎಕರೆ 23 ಗುಂಟೆ ಜಮೀನಿನಲ್ಲಿ 2 ಎಕರೆ ಕ್ಷೇತ್ರದಲ್ಲಿ ಸರ್ಕಾರಿ ಶಾಲೆ, 1 ಎಕರೆ 10 ಗುಂಟೆ ಕ್ಷೇತ್ರವನ್ನು ಸ್ಮಶಾನಕ್ಕಾಗಿ ಖಾಲಿ ಜಾಗ ಬಿಡಲಾಗಿದ್ದು, 1 ಎಕರೆ 20 ಗುಂಟೆ ಕ್ಷೇತ್ರದಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ತಾಲ್ಲೂಕು ಪಂಚಾಯತ್ ಮುಧೋಳ್, ಇವರಿಗೆ ಆಶ್ರಯ ಯೋಜನೆ ಸಲುವಾಗಿ ಮಂಜೂರಾದಂತೆ ಹಂಚಿಕೆ ಮಾಡದ ಮನೆಗಳು, 0-10 ಗುಂಟೆ ಕ್ಷೇತ್ರದಲ್ಲಿ

ನೀರಿನ ಟ್ಯಾಂಕ್ ಹಾಗೂ ಸರ್ಕಾರಿ ಆಸ್ಪತ್ರೆ ಉಳಿದ 3 ಎಕರೆ 23 ಗುಂಟೆ ಕ್ಷೇತ್ರದಲ್ಲಿ ಅನಧಿಕೃತವಾಗಿ ಮನೆಗಳನ್ನು ನಿರ್ಮಾಣ ಮಾಡಿರುವದು ಕಂಡು ಬರುತ್ತದೆ ಎಂದು ನಕ್ಷೆಯೊಂದಿಗೆ ವರದಿಯನ್ನು ಸಲ್ಲಿಸಿರುತ್ತಾರೆಂದು ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿ ತಿಳಿಸಲಾಗಿರುತ್ತದೆ.

ತಹಶೀಲ್ದಾರ್‌ರವರಿಂದ ಸ.ನಂ. 29ರ 3 ಎಕರೆ 23 ಗುಂಟೆ ಕ್ಷೇತ್ರದಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡಿರುವಂತಹ ಮನೆಗಳನ್ನು ತೆರವುಗೊಳಿಸಿ ಕ್ರಮ ಜರುಗಿಸಿ ವರದಿ ಸಲ್ಲಿಸುವಂತೆ ಕೋರಲಾಗಿದ್ದರ ಮೇರೆಗೆ ಮುಧೋಳ ತಹಶೀಲ್ದಾರ್ ರವರು ದಿನಾಂಕ: 13.01.2014 ರಂದು ವರದಿಯಲ್ಲಿ ಸಲ್ಲಿಸಿ, 3 ಎಕರೆ 23 ಗುಂಟೆ ಕ್ಷೇತ್ರದ ಜಮೀನಿನಲ್ಲಿ 72 ಜನರ ಗುಡಿಸಲು ಹಾಗೂ ಮನೆಗಳಿರುತ್ತವೆ ಅವುಗಳನ್ನು ತಲೆತಲಾಂತರದಿಂದ ಸದರಿ ಜಮೀನಿನಲ್ಲಿ ಗುಡಿಸಲುಗಳನ್ನು ಕಟ್ಟಿ ವಾಸವಾಗಿದ್ದ ಕಾರಣ. ಕೆಲವೊಂದು ಠರಾವುಗಳ ಮೂಲಕ ಹಾಗೂ ಕೆಲವೊಂದನ್ನು ಗ್ರಾಮ ಪಂಚಾಯಿತಿಯವರು ನಮೂನೆ-9ಕ್ಕೆ ದಾಖಲಿಸಿದ ನಂತರ ಸದರಿಯವರು ನಿರ್ಮಿಸಿಕೊಂಡಿರುತ್ತಾರೆಂದು. ಮುಂದುವರೆದು ಆಲಗುಂಡಿ ಜಿ.ಕೆ.ಗ್ರಾಮ ಘಟಪ್ರಭಾ ನದಿ ನೆರೆಹಾವಳಿಯಿಂದ ಭಾಧಿತಗೊಳ್ಳುತ್ತಿದ್ದು ಸಂಪೂರ್ಣ ಗ್ರಾಮವನ್ನು ಸ್ಥಳಾಂತರಗೊಳಿಸುವುದು ಇರುತ್ತದೆ ಎಂದು ಹಾಗೂ ಸ.ನಂ.29ರಲ್ಲಿನ ಮನೆಗಳು ಕೂಡ ನೆರೆಹಾವಳಿಯಿಂದ ಬಾಧಿತಗೊಳ್ಳುತ್ತಿರುವುದರಿಂದ, ಸದರಿ ಸ್ಥಳವನ್ನು ಕೂಡ ಸ್ಥಳಾಂತರಿಸುವ ಸಂಭವ ಇರುವುದರ ಕಾರಣ, ಸ.ನಂ.29ರ ಸರ್ಕಾರಿ ಜಾಗೆಯಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡಿದ ಮನೆಗಳನ್ನು ತೆರವುಗೊಳಿಸುವ ಕಾರ್ಯವನ್ನು ತಾತ್ಕಾಲಿಕವಾಗಿ ಕೈಬಿಡಲು ತಹಶೀಲ್ದಾರ ಮುಧೋಳ್, ಇವರು ಕೋರಿರುತ್ತಾರೆಂದು ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿ ತಿಳಿಸಲಾಗಿರುತ್ತದೆ.

ಮುಧೋಳ ತಹಶೀಲ್ದಾರ್‌ರವರ ವರದಿಯ ಮೇಲೆ ಜಿಲ್ಲಾಧಿಕಾರಿಗಳು ಬಾಗಲಕೋಟೆ, ಇವರಿಂದ ಪಡೆಯಲಾದ ವರದಿಯಲ್ಲಿ ಆಲಗುಂಡಿ ಜಿ.ಕೆ.ಗ್ರಾಮದ ಸ.ನಂ. 29ರ ಅಂದಾಜು 3 ಎಕರೆ 23 ಗುಂಟೆ ಜಮೀನಿನಲ್ಲಿ ಸುಮಾರು 72 ಮನೆಗಳ ಪೈಕಿ 34 ಮನೆಗಳು ಸರ್ಕಾರದ ವಿವಿಧ ಯೋಜನೆಯಡಿ ನಿರ್ಮಿಸಿದ್ದು ಕಂಡು ಬರುತ್ತದೆಯೆಂದು, ಅಲ್ಲದೇ ಅವರೆಲ್ಲ ಬಡವರ್ಗದವರಿದ್ದು, ಪ್ರಸ್ತಾಪಿತ ಗ್ರಾಮವನ್ನು ಈಗಾಗಲೇ ಯು.ಕೆ.ಪಿ.ಯಿಂದ ಮುಳಗಡೆ ಗ್ರಾಮವೆಂದು ಪರಿಗಣಿಸಿ ಪುನರ್ ವಸತಿ ಕಲ್ಪಿಸಿರುವುದರಿಂದ, ಮತ್ತು ಸರ್ಕಾರ ಹೊರಡಿಸಿದ ಅಧಿಸೂಚನೆಯ ಅನಧಿಕೃತ ಕಟ್ಟಡ ನಿರ್ಮಿಸಿದ ಜನರು ಸಕ್ರಮಕ್ಕಾಗಿ ಅರ್ಜಿಗಳನ್ನು ಸಲ್ಲಿಸಿರುವುದರಿಂದ ಅತಿಕ್ರಮಣ ತೆರವುಗೊಳಿಸುವ ಕಾರ್ಯವನ್ನು ಕೈಬಿಡುವುದು ಸೂಕ್ತವೆಂದು ಅಭಿಪ್ರಾಯಪಟ್ಟು ವರದಿ ಸಲ್ಲಿಸಿರುವುದಾಗಿ ಮಾನ್ಯ ಉಪಲೋಕಾಯುಕ್ತರವರ ವರದಿಯಲ್ಲಿ ತಿಳಿಸಲಾಗಿರುತ್ತದೆ.

ಜಿಲ್ಲಾಧಿಕಾರಿಗಳು ಬಾಗಲಕೋಟೆ, ಇವರು ಸಲ್ಲಿಸಿದ್ದ ವರದಿಯನ್ನು/ದಾಖಲೆಗಳನ್ನು ಪರಿಶೀಲಿಸಿ, ಸ.ನಂ. 29ರಲ್ಲಿ ಒಟ್ಟು 72 ಸ್ವತ್ತುಗಳ ಪೈಕಿ ಮನೆಗಳು ಮತ್ತು ಬೈಲು ಜಾಗೆಯಿರುವುದು ಕಂಡುಬರುತ್ತದೆಯೆಂದು ಮತ್ತು ವರದಿಯ್ಲಲಿ ಹೇಳಿದಂತೆ 72 ಮನೆಗಳ ಪೈಕಿ 34 ಮನೆಗಳು ಸರ್ಕಾರದ ವಿವಿಧ ಯೋಜನೆಯಡಿ ನಿರ್ಮಿಸಿರುತ್ತಾರೆಂದು ಹೇಳಿದ್ದರ ಕುರಿತು ಸದರಿ ಮನೆಗಳು ಯಾರ ಹೆಸರಿಗೆ ಮತ್ತು ಯಾವ ಯೋಜನೆಯಡಿ ಹಂಚಿಕೆಯಾಗಿರುತ್ತವೆಂದು ಹಾಗೂ ಪ್ರಸ್ತಾಪಿತ ಆಲಗುಂಡಿ ಜಿ.ಕೆ.ಗ್ರಾಮವನ್ನು ಯು.ಕೆ.ಪಿ ಯಿಂದ ಮುಳುಗಡೆ ಗ್ರಾಮವೆಂದು ತೀರ್ಮಾನಿಸಿ ಪುನರ್‌ವಸತಿ ಕಲ್ಪಿಸುತ್ತಿರುವುದಾಗಿ ಹೇಳಿದ್ದು, ಈ ಬಗ್ಗೆ ಯಾವ ಜಾಗೆಯನ್ನು ಪುನರ್ ವಸತಿಗಾಗಿ ಆಯ್ಕೆ ಮಾಡಿರುತ್ತಾರೆಂದು ಹಾಗೂ ಸರ್ಕಾರವು ಹೊರಡಿಸಿದ ಅಧಿಸೂಚನೆ ಅನ್ವಯ ಎಷ್ಟು ಜನರು ಅನಧಿಕೃತ ಕಟ್ಟಡವನ್ನು ಸಕ್ರಮವಾಗಿ ಅರ್ಜಿ ಸಲ್ಲಿಸಿರುತ್ತಾರೆ ಮತ್ತು ಸದರಿ ಅರ್ಜಿಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿರುತ್ತದೆ ಎಂಬುದರ ಕುರಿತು ಜಿಲ್ಲಾಧಿಕಾರಿಯವರ ವರದಿಯಲ್ಲಿ ತಿಳಿಸಿರುವುದಿಲ್ಲವೆಂದು ಮಾನ್ಯ ಉಪಲೋಕಾಯುಕ್ತರವರ ವರದಿಯಲ್ಲಿ ನಮೂದಿಸಲಾಗಿರುತ್ತದೆ.

ಕಡತ/ದಾಖಲಾತಿಗಳನ್ನು ಹಾಗೂ 1ನೇ ಮತ್ತು 2ನೇ ಎದುರುದಾರರು ನೀಡಿರುವ ಹೇಳಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಆಲಗುಂಡಿ ಬಿ.ಕೆ. ಗ್ರಾಮದಲ್ಲಿ 3 ಎಕರೆ 23ಗುಂಟೆ ಜಮೀನಿನಲ್ಲಿ ಅನಧಿಕೃತ ಕಟ್ಟಡಗಳು ಕಟ್ಟಲಾಗಿದೆ ಎಂದು ತಿಳಿದುಬರುತ್ತದೆ. ದಿನಾಂಕ: 03.03.2014 ರಂದು ಪ್ರಕಟಿಸಿದ ಕರ್ನಾಟಕ ರಾಜ್ಯ ಪತ್ರದ ಚ್ಯಾಪ್ಟರ್ 13(ಬಿ) ಪ್ರಕಾರ ಜಾಗೆಯನ್ನು ಅಕ್ರಮವಾಗಿ ಕಟ್ಟಿದ ಕಟ್ಟಡಗಳನ್ನು ಸಕ್ರಮಗೊಳಿಸಲು ಗ್ರಾಮ ಪಂಚಾಯತಿಗೆ ಅಧಿಕಾರವಿರುವುದಿಲ್ಲವೆಂದು ಸದರಿ ಗ್ರಾಮದಲ್ಲಿ ಕಟಿದ ಕಟ್ಟಡಗಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವುದರಿಂದ, ಸರ್ಕಾರ ತಿದ್ದುಪಡಿ ಮಾಡಿದ ಶಾಸನ ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಹಾಗೂ 1 ಮತ್ತು 2ನೇ ಎದುರುದಾರರು ಮೇಲ್ನೋಟಕ್ಕೆ ಪ್ರಕರಣದಲ್ಲಿ ಲೋಪವೆಸಗಿರುತ್ತಾರೆಂದು ಕಂಡುಬಂದಿರುವುದರಿಂದ, ಹಾಗೂ 1 ಮತ್ತು 2ನೇ ಎದುರುದಾರರು ಸರ್ಕಾರಿ ನೌಕರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲೋಟಕ್ಕೆ ಕಂಡು ಬಂದಿರುವುದರಿಂದ ಹಾಗೂ ಅಧಿಕಾರಿ/ನೌಕರರು ನೀಡಿರುವ ಲಿಖಿತ ರಕ್ಷಣಾ ಹೇಳಿಕೆಗಳು ಸಮಂಜಸವಾಗಿಲ್ಲದೆ/ತೃಪ್ತಿಕರವಾಗಿಲ್ಲದೆ ಇವರ ವಿರುದ್ಧದ ನಡುವಳಿಗಳನ್ನು ಕೈಬಿಡಲು ಸಮಾಧಾನಕರ ಕಾರಣ ತೋರಿಸಿಲ್ಲವಾದುದರಿಂದ, ಹಾಗೂ ಇವರುಗಳು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(i)(ii) (iii)ರನ್ನು ಉಲ್ಲಂಘಿಸಿರುವುದರಿಂದ, ಆರೋಪಿತ ಅಧಿಕಾರಿಗಳಾದ, ಶ್ರೀ ಜಿ.ವೆಂಕಟೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಮುಧೋಳ್, ಮತ್ತು ಈ ಹಿಂದೆ ಮಾಚಕನೂರು ಗ್ರಾಮ ಪಂಚಾಯತಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ, ಶ್ರೀ ಗುರುಬಸವಯ್ಯ ಎಂ.ಹಿರೇಮಠ ಇವರುಗಳ ವಿರುದ್ಧದ ಆರೋಪಗಳ ಸಂಬಂಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಪ್ರಕರಣವನ್ನು ತಮಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ವಹಿಸಿಕೊಡುವಂತೆ ಮಾನ್ಯ ಉಪಲೋಕಾಯುಕ್ತರು, ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸನ್ನು ಕಳುಹಿಸಿಕೊಡುತ್ತಾ, ಅಂತೆಯೇ ಕ್ರಮವಹಿಸುವಂತೆ ಎ.ಆರ್.ಎಲ್.ಓ-2 ರವರು ಮೇಲೆ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತರು-1 ರವರ ವರದಿ ಹಾಗೂ ಅದರೊಂದಿಗಿನ ಅಡಕಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಆಪಾದಿತ ಸರ್ಕಾರಿ ಅಧಿಕಾರಿ/ನೌಕರರು ಕರ್ತವ್ಯಲೋಪ, ದುರ್ನಡತೆ/ದುರ್ವರ್ತನೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಆದುದರಿಂದ, ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಒಪ್ಪಿ, ಈ ಪ್ರಕರಣದಲ್ಲಿ ಭಾಗಿಯಾಗಿರುವ, ಶ್ರೀ ಜಿ.ವೆಂಕಟೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಮುಧೋಳ್, ಮತ್ತು ಈ ಹಿಂದೆ ಮಾಚಕನೂರು ಗ್ರಾಮ ಪಂಚಾಯತಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ, ಶ್ರೀ ಗುರುಬಸವಯ್ಯ ಎಂ.ಹಿರೇಮಠ ಇವರುಗಳ ಇವರುಗಳ ವಿರುದ್ಧದ ಆರೋಪಗಳ ಸಂಬಂಧ, ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ, ಅದೇ ನಿಯಮಾವಳಿಗಳ ನಿಯಮ 13 ರನ್ವಯ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ) ರನ್ವಯ ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 152 ವಿಸೇಬಿ 2016 ಬೆಂಗಳೂರು ದಿನಾಂಕ: 15-09-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು

1957ರ ನಿಯಮ 11 ಮತ್ತು 11(ಎ) ರನ್ವಯ ವಿವರವಾದ ಇಲಾಖಾ ವಿಚಾರಣೆಯನ್ನು ಅದೇ ನಿಯಮಾವಳಿಗಳ ನಿಯಮ 13 ರನ್ವಯ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ 14(ಎ) ಪ್ರಕಾರ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು. ಇವರಿಗೆ ವಹಿಸಿ ಆದೇಶಿಸಿದೆ.

| ಕ್ರ.ಸಂ. | ಅಧಿಕಾರಿ/ನೌಕರರ ಹೆಸರು ಶ್ರೀ/ಶ್ರೀಮತಿ |
|---|---|
| 1 | ಶ್ರೀ ಜಿ.ವೆಂಕಟೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಮುಧೋಳ್, ಬಾಗಲಕೋಟ ಜಿಲ್ಲೆ. |
| 2 | ಶ್ರೀ ಗುರುಬಸವಯ್ಯ ಎಂ.ಹಿರೇಮಠ, ಹಿಂದಿನ ಕಾರ್ಯದರ್ಶಿ, ಮಾಚಕನೂರು ಗ್ರಾಮ ಪಂಚಾಯತಿ, ಮುಧೋಳ ತಾಲ್ಲೂಕು ಬಾಗಲಕೋಟ ಜಿಲ್ಲೆ. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

15/9/2016

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-1. ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ನಿರ್ದೇಶಕರು, ಪಂ.ರಾಜ್-1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
4) ಎ.ಆರ್.ಇ.ಓ.-2. ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. ಜಿಲ್ಲಾ ಪಂಚಾಯತ್. ಬಾಗಲಕೋಟೆ

**ಪ್ರತಿ ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ. ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು. ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.